


International Journal of Kannada Research
www.kannadajournal.com

**ISSN: 2454–5813**
IJKR 2023; 9(4): 194-197
© 2023 IJKR
www.kannadajournal.com
Received: 08-11-2023
Accepted: 10-12-2023

**ಡಾ.ಎಂ.ಬಿ.ಸುರೇಶ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ.ಎಂ.ಬಿ.ಸುರೇಶ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಕರ್ನಾಟಕ, ಭಾರತ

# ವಚನ ಸಾಹಿತ್ಯದಲ್ಲಿ ನೈತಿಕ ಮೌಲ್ಯಗಳು

**ಡಾ.ಎಂ.ಬಿ.ಸುರೇಶ**

**DOI:** https://doi.org/10.22271/24545813.2023.v9.i4c.919

**ಪೀಠಿಕೆ**

ಸಹಸ್ರಾರು ವರ್ಷಗಳ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಕನ್ನಡ ನಾಡು ಅನುಭಾವಿಗಳು, ಶರಣರು, ದಾರ್ಶನಿಕರು ಮತ್ತು ಸಾಧುಸಂತರು ನೆಲೆಸಿದ ಪುಣ್ಯ ಭೂಮಿಯಾಗಿತ್ತು. ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಅನುಭಾವವೇ ಪ್ರಧಾನವೆಂದು ಈ ಬಸವಾದಿ ಶರಣರು ಸಾರಿದರು. ವಚನಕಾರರು ಜನ ಸಾಮಾನ್ಯರಿಗೆ ನೈತಿಕ ಜೀವನ ದರ್ಶನ ಮಾಡಿಸಿದರು. ಸಂಸ್ಕೃತದಲ್ಲಿ ನಿಕ್ಷಿಪ್ತವಾಗಿದ್ದ ತತ್ವಶಾಸ್ತ್ರಗಳು ಕೇವಲ ಪಂಡಿತರು ಮಾತ್ರರಿಗೆ ಮೀಸಲಾಗಿತ್ತೇ ಹೊರತು ಸಾಮಾನ್ಯರಿಗೆ ಎಟಕುವಂತಿರಲಿಲ್ಲ. ಇಂಥ ಸನ್ನೀವೇಶದಲ್ಲಿ ಉದಯಿಸಿದ ವಚನ ಚಳುವಳಿಯ ಅನುಭಾವಿ ಶರಣರು ಶಾಸ್ತ್ರ ಗ್ರಂಥಗಳ ಒಳ–ಹೊರ ತಿರುಳು ಮತ್ತು ಅವುಗಳಲ್ಲಿ ಅಡಗಿರುವ ಸತ್ಯಾಸತ್ಯತೆಗಳನ್ನು ಒರೆಗೆ ಹಚ್ಚಿ ಅದರ ಸಾರವನ್ನು ಶ್ರೀ ಸಾಮಾನ್ಯರಿಗೆ ಅರ್ಥವಾಗುವ ಸರಳ ಕನ್ನಡ ಭಾಷೆಯಲ್ಲಿ ಜನಸಾಮಾನ್ಯರಿಗೆ ತಲುಪಿಸುವ ಕೈಂಕರ್ಯಕ್ಕೆ ವಚನಗಳನ್ನು ಪ್ರಕ್ಷಿಪ್ತಗೊಳಿಸಿದರು.

12ನೇ ಶತಮಾನದ ವಚನಗಳ ರಚನೆ ಚಾರಿತ್ರಿಕ, ಐತಿಹಾಸಿಕ ಕಾರಣವಾಗಿ ಉಳಿದಿದ್ದು, ಸಾಮಾಜಿಕ ಸಮಾನತೆ ಸಾರುವಲ್ಲಿ, ಸಾಮರಸ್ಯ ಸಹಬಾಳ್ವೆಯನ್ನು ಬೆಳೆಸುವುದಕ್ಕಾಗಿ ವಚನ ಸಾಹಿತ್ಯದ ಅನುಸರಣೆ ಇಂದಿಗೂ ಪ್ರಸ್ತುತವಾಗಿದೆ. ವಚನಕಾರರ ನೈತಿಕ ಮೌಲ್ಯಗಳು ಅವರು ಅನುಗ್ರಹಿಸಿರುವ ವಚನಗಳಲ್ಲೇ ಅಡಕವಾಗಿವೆ. ಬಸವ ಪ್ರಜ್ಞೆಯು ನೈತಿಕ,ಸಾಮಾಜಿಕ,ಧಾರ್ಮಿಕ,ಶೈಕ್ಷಣಿಕ ಮತ್ತು ಆರ್ಥಿಕ ಮೌಲ್ಯಗಳನ್ನು ಸಾಕಾರಗೊಳಿಸಿದ ಮಾನವ ಹಕ್ಕುಗಳ ಪ್ರಜ್ಞೆಯಾಗಿದೆ. ಅಲ್ಲಮ ಪ್ರಭು, ಚೆನ್ನ ಬಸವಣ್ಣ, ಸಿದ್ಧರಾಮ, ಮಾದಾರ ಚನ್ನಯ್ಯ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಸತ್ಯಕ್ಕ, ಕುಂಬಾರ ಗುಂಡಣ್ಣ, ಮೊದಲಾದ ನೂರಾರು ಶರಣರು ಬಸವಣ್ಣನವರ ಜಾತ್ಯಾತೀತ, ಪ್ರಜಾ ಪ್ರಭುತ್ವವಾದಿ ಪ್ರಜ್ಞೆಯ ಚೇತನಗಳಾಗಿ ಕಂಡುಬಂದರು.

ಶರಣರು, ಸಂತರು ನೈತಿಕ ಸತ್ಯಕ್ಕೆ ವಿಶೇಷ ಪ್ರಾಧಾನ್ಯತೆ ನೀಡಿರುವುದನ್ನು ವಚನ ಸಾಹಿತ್ಯ ಹಾಗು ಅನುಭಾವ ಸಾಹಿತ್ಯದಲ್ಲಿ ಕಾಣುತ್ತೇವೆ.

ದಿಟವ ನುಡಿವುದು, ನುಡಿದಂತೆ ನಡೆವುದು,
ಹುಸಿಯ ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲ ಸಂಗಮದೇವ॥

ಮೇಲಿನ ವಚನದ ಆಶಯದಂತೆ ಸತ್ಯವನ್ನೇ ನುಡಿಯುವುದು, ನುಡಿದಂತೆ ನಡೆಯುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಯಶಸ್ಸಿನ ಸೂತ್ರವಾಗಿದೆ. ಸ್ವಾರ್ಥಕ್ಕಾಗಿ ಹೇಳಲಾದ ಹುಸಿ ಮಾತುಗಳು ಮತ್ತು ಆತ್ಮಸಾಕ್ಷಿಗೆ ವಿರುದ್ಧವಾದ ಮಾತುಗಳು ಶರಣರ ದೃಷ್ಟಿಯಲ್ಲಿ ಸ್ವತಂತ್ರ ಅಭಿವ್ಯಕ್ತಿಗಳಾಗುವುದಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯದ ಸಂದರ್ಭದಲ್ಲಿ ನಮ್ಮ ನಡೆ–ನುಡಿಗಳಲ್ಲಿ ಸತ್ಯ ಹಾಗು ಸಮನ್ವಯತೆಯನ್ನು ಕಾಯ್ದುಕೊಳ್ಳುವುದು ಅನಿವಾರ್ಯವಾಗುತ್ತದೆ. ನಾವು ನುಡಿದಂತೆ ನಡೆಯಬೇಕೆನ್ನುವುದೇನೋ ನಿಜ ಆದರೆ ಏನನ್ನು ನುಡಿಯಬೇಕು ಎನ್ನುವುದೂ ಕೂಡ ಅಷ್ಟೇ ಮುಖ್ಯವಾಗುತ್ತದೆ. ಸುಳ್ಳು ಮತ್ತು ಸತ್ಯದ ನಡುವಿನ ವ್ಯತ್ಯಾಸಗಳನ್ನು ಗುರುತಿಸುವಷ್ಟು ಜನರನ್ನು ಪ್ರಬುದ್ಧಗೊಳಿಸಬೇಕು. ಸುಳ್ಳು ಅಸಹ್ಯ ಆತ್ಮವಂಚನೆಯ ಸಂಕೇತವೆಂದು, ಸತ್ಯ ನ್ಯಾಯ ನಿಷ್ಠೆ ದೃಢತೆಯ ಸಂಕೇತವೆಂದು ದಿನನಿತ್ಯದ ಚಟುವಟಿಕೆಗಳಲ್ಲಿ ‘

ಬಿಂಬಿಸಬೇಕು. ಸುಳ್ಳಿನ ಹಾದಿ ವಿಫಲತೆಯ, ನಾಶದ ಮಾರ್ಗವೆಂದು, ಸತ್ಯವು ಸಾಧನೆಯ, ನಾಗರಿಕತೆಯ, ನೆಮ್ಮದಿಯ ಮಾರ್ಗವೆಂದು ವ್ಯಾವಹಾರಿಕ ಜಗತ್ತಿನಲ್ಲಿ ಫಲಿತಾಂಶಗಳ ಮುಖಾಂತರ ತೋರಿಸಿಕೊಡಬೇಕು. ಸತ್ಯಂ ವದ, ಧರ್ಮಂ ಚರ " (ಸತ್ಯವನ್ನು ಹೇಳು, ಸದಾಚಾರವನ್ನು ಅನುಸರಿಸು), " ಸತ್ಯಮೇವ ಜಯತೇ " (ಸತ್ಯವೇ ಜಯಿಸುತ್ತದೆ), " ಸತ್ಯನ್ ನಾಸ್ತಿ ಪರೋ ಧರ್ಮ " (ಸತ್ಯಕ್ಕಿಂತ ದೊಡ್ಡ ಧರ್ಮವಿಲ್ಲ) ಮತ್ತು ಇನ್ನೂ ಅನೇಕ ಸೂತ್ರಗಳು ಮತ್ತು ಶ್ಲೋಕಗಳು ಇವೆ. ಸತ್ಯದ ಕಡೆಗೆ ಮಾನವಕುಲದ ಸಮರ್ಪಣೆಯನ್ನು ಬಲಪಡಿಸಿವೆ.

ಸತ್ಯದಲ್ಲಿ ನಡೆವುದು ಶೀಲ, ಸತ್ಯದಲ್ಲಿ ನುಡಿವುದು ಶೀಲ
ಸತ್ಯಸದಾಚಾರದಲ್ಲಿ ವರ್ತಿಸಿ ನಿತ್ಯವನರಿವುದೇ ಶೀಲ ಕಾಣಿರೋ
ಮಹಾಲಿಂಗಗುರು ಶಿವಸಿದ್ದೇಶ್ವರ ಪ್ರಭುವೇ।

ಎಂದು ಶಿವಯೋಗಿ ಸಿದ್ಧಲಿಂಗೇಶ್ವರರು ನೈತಿಕ ಸತ್ಯದ ಮೂಲಕವೇ ಆಧ್ಯಾತ್ಮಿಕ ಸತ್ಯವನ್ನು ಸಾಧಿಸಬೇಕೆಂದು ಹೇಳಿರುವುದನ್ನು ಗಮನಿಸಿದರೆ ನಮಗೆ ನೈತಿಕ ಸತ್ಯದ ಮಹತ್ವದ ಅರಿವಾಗದೇ ಇರದು. ಸಾವಿರ ಅಶ್ವಮೇಧಯಾಗಗಳ ಫಲವನ್ನು ಮತ್ತು ಸತ್ಯವನ್ನು ನುಡಿದಾಗ ಬರುವ ಫಲವನ್ನು ತಕ್ಕಡಿಯಲ್ಲಿ ಹಾಕಿ ತೂಗಿದರೆ ಸತ್ಯವೇ ಶ್ರೇಷ್ಠವೆಂದು ನಿರ್ಣಯವಾಗುತ್ತದೆ. ಸಾವಿರ ಅಶ್ವಮೇಧಯಾಗಗಳಿಗಿಂತಲೂ ಸತ್ಯವೇ ಶ್ರೇಷ್ಠವಾದುದು. ಯಾರು ಸತ್ಯವನ್ನು ಹೇಳುವುದಿಲ್ಲವೋ, ಅವರು ಅಶ್ವಮೇಧಯಾಗವನ್ನು ಮಾಡಿಯೂ ಕೂಡ ವ್ಯರ್ಥ. ಆದ್ದರಿಂದ ಎಂದೆಂದೂ ಸತ್ಯವನ್ನೇ ಹೇಳಬೇಕು. ಸುಳ್ಳು ಸರ್ವಥಾ ಹೇಳಬಾರದು. ಸುಳ್ಳನ್ನು ನಿಜದ ವಿರುದ್ಧ ನಿಲ್ಲಿಸಿ ಎಲ್ಲಾ ವಿಷಯಗಳಲ್ಲೂ, ಎಲ್ಲಾ ಸಂದರ್ಭಗಳಲ್ಲಿಯೂ ನಿಜವೇ ಹೆಚ್ಚು ಶಕ್ತಿಶಾಲಿ ಎಂಬ ವಾತಾವರಣ ನಿರ್ಮಿಸಬೇಕು. ನಮ್ಮ ನಡೆನುಡಿಗಳಲ್ಲಿ ನಾವು ಸತ್ಯವನ್ನು ಅಳವಡಿಸಿಕೊಂಡರೆ ನಾವಿರುವಲ್ಲಿಯೇ ದೇವಲೋಕವನ್ನು ಸೃಷ್ಟಿಸಿಕೊಳ್ಳಬಹುದೆಂಬುದು ಧರ್ಮಗುರು ಬಸವಣ್ಣನವರ ಮಹೋನ್ನತ ಸಂದೇಶವಾಗಿದೆ.

ಊರಮುಂದೆ ಹಾಲಹಳ್ಳ ಹರಿಯುತ್ತಿರಲು
ಓರೆಯಾವಿನ ಬೆನ್ನಲಿ ಹರಿಯಲದೇಕಯ್ಯ. ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲಸಂಗಮದೇವರುಳ್ಳನ್ನಕ್ಕ ಬಿಜ್ಜಳನ ಭಂಡಾರವೆನಗೇಕಯ್ಯ

ಬೇರೆಯವರ ವಸ್ತುಗಳಿಗೆ ಆಸೆಪಟ್ಟು ಕಳ್ಳತನದಂತಹ ಕೃತ್ಯಗಳಿಗೆ ತೊಡಗಬಾರದೆಂಬುದನ್ನು ಬಸವಣ್ಣನವರ ಮೇಲಿನ ವಚನದಿಂದ ತಿಳಿಯಬಹುದಾಗಿದೆ. ಊರ ಮುಂದೆ ಹಾಲಹಳ್ಳ ಹರಿಯುವಾಗ ಮೊಂಡಹಸುವಿನ ಹಿಂದೆ ನಾನೇಕೆ ಓಡಲಿ? ನಾನೇಕೆ ನಾಚಿಕೆಗೆಡಬೇಕು? ನಾನೇಕೆ ಅಪಮಾನಕ್ಕೊಳಗಾಗಬೇಕು? ಕೂಡಲಸಂಗಮದೇವರು ಸಮಾಜದ ಪ್ರತೀಕವಾಗಿ ನನ್ನ ಜೊತೆ ಇರುವಾಗ ನನಗೆ ಬಿಜ್ಜಳನ ಭಂಡಾರವೇಕೆ ಬೇಕು' ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. ಈ ಪ್ರಶ್ನೆಗಳಲ್ಲಿ ರಾಜ್ಯಶಕ್ತಿಯ ಜನವಿರೋಧಿ ಗುಣಲಕ್ಷಣಗಳ ಸೂಚನೆಗಳಿವೆ. ಜನಶಕ್ತಿಯ ಮಹತ್ವವನ್ನು ಸಾರುವ ಮಾತುಗಳಿವೆ. ದೃಢನಿರ್ಧಾರವಿದೆ. ತರ್ಕಬದ್ಧವಾದ ಉತ್ತರಗಳೂ ಇವೆ. ನಿಜದ ನೆಲೆಯಲ್ಲಿ ಮಾತನಾಡುವವರಿಗೆ ಇರುವ ಗಾಂಭೀರ್ಯ, ಧೈರ್ಯ, ತಿಳಿಹೇಳುವ ಸಾಮರ್ಥ್ಯ, ಸಮಾಧಾನ ಮತ್ತು ಅರ್ಥಹೀನ ಆರೋಪಗಳನ್ನು ಸಹಜವಾಗಿ ಬಯಲಿಗೆಳೆಯುವ ಕ್ರಮ, ಹೀಗೆ ಇವೆಲ್ಲವನ್ನೂ ಒಳಗೊಂಡ ಈ ವಚನ ಬಸವಣ್ಣನವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತದೆ.

ಬಸವಣ್ಣನವರು ರಾಜ್ಯಶಕ್ತಿಗೆ ಮೊಂಡಹಸು ಎಂದು ಕರೆದಿದ್ದಾರೆ. ಹಾಲು ಹಿಂಡಲು ಹೋದಾಗ ಇದು ಒದೆಯುತ್ತದೆ. ಇರಿಯಲು ಬರುತ್ತದೆ. ಇಂಥ ರಾಜ್ಯಶಕ್ತಿಯ ಭಂಡಾರದ ಬೆನ್ನನ್ನು ನಾನೇಕೆ ಹತ್ತಲಿ? ರಾಜ್ಯಭಂಡಾರದ ಹಣದಿಂದ ನಾನೇಕೆ ದಾಸೋಹ ನಡೆಸಲಿ ಎಂದು ಅವರು ಪ್ರಶ್ನಿಸುತ್ತಾರೆ. ಬಸವಣ್ಣನವರು ಬಿಜ್ಜಳನ ಭಂಡಾರವನ್ನು ಸೂರೆಗೈದು ಶರಣಸಂಕುಲ ಬೆಳೆಸುತ್ತಿದ್ದಾರೆ ಎಂದು ಶರಣಧರ್ಮ ವಿರೋಧಿ ಪಟ್ಟಭದ್ರ ಹಿತಾಸಕ್ತಿಗಳು ಗುಲ್ಲೆಬ್ಬಿಸಿದ್ದವು. ವಿರೋಧಿಗಳ ಈ ಆರೋಪಕ್ಕೆ ಶುದ್ಧಹಸ್ತರಾದ ಬಸವಣ್ಣನವರು ಸಮರ್ಪಕವಾದ ಉತ್ತರವನ್ನು ಈ ವಚನದಲ್ಲಿ ನೀಡಿದ್ದಾರೆ.

ಪುಣ್ಯ ಪಾಪಂಗಳೆಂಬವು ತಮ್ಮ ಇಷ್ಟವು ಕಂಡಿರಯ್ಯ।
ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ
ದೇವ ಭಕ್ತ ಜಯ ಜಯ ಎಂಬ ನುಡಿಯೊಳಗೆ
ಕೈಲಾಸವೈದುದು ಕೂಡಲ ಸಂಗಮದೇವ॥

ನಮ್ಮ ವರ್ತನೆ ಸಭ್ಯವಾಗಿರಬೇಕು. ನಮ್ಮ ಸಭ್ಯತೆ ಸಮಾಜದ ಮುಂದೆ ಪ್ರದರ್ಶಿತವಾಗುವುದು ನಾವಾಡುವ ಮಾತುಗಳಿಂದ. ಮಾತಿನ ಅಪಾರಶಕ್ತಿಯನ್ನು ಬಸವಣ್ಣನವರು ಈ ವಚನದಲ್ಲಿ ತಿಳಿಸಿದ್ದಾರೆ. ಮಾತು ನಮ್ಮ ವ್ಯಕ್ತಿತ್ವದ ಧ್ಯೋತಕ. ನಾವಾಡುವ ಮಾತಿಗೆ ಬಾಣದ ಮೊನಚು ಇರುತ್ತದೆ. ನಾವಾಡುವ ಮಾತಿಗೆ ಕೊಡಲಿಗಿರುವಂಥ ಹರಿತಗುಣವೂ ಇರುತ್ತದೆ. ಅದು ನಮ್ಮ ಅಂತರಂಗವನ್ನು ಚುಚ್ಚುತ್ತದೆ. ನಮ್ಮ ಅಭಿಮಾನವನ್ನು ಕತ್ತರಿಸುತ್ತದೆ. ನಮ್ಮ ಅಂತರಂಗಕ್ಕೆ ಆದಂಥ ಗಾಯ, ಅಭಿಮಾನಕ್ಕೆ ಬಿದ್ದಂಥ ಪೆಟ್ಟು – ಎಂದಿಗೂ ವಾಸಿಯಾಗದು. ಏಕೆಂದರೆ ಈ ಗಾಯ ನಮ್ಮ ಮನಸ್ಸಿನಲ್ಲಿ ಸ್ಥಿರವಾಗಿರುತ್ತದೆ. ನಾವು ಕಟ್ಟಿದ ಕಟ್ಟಡ ಸರಿ ಇಲ್ಲ ಎಂದಾದಲ್ಲಿ ಅದನ್ನು ಕೆಡವಿ ಮತ್ತೆ ಕಟ್ಟಬಹುದು. ಆದರೆ ನಮ್ಮ ಮಾತಿನ ಮೂಲಕ ನಾವೇ ಕಟ್ಟಿಕೊಂಡ ನಮ್ಮ ವ್ಯಕ್ತಿತ್ವವನ್ನು ಎಂದಿಗೂ ಕೆಡವಿ, ಇನ್ನೊಮ್ಮೆ ಅದನ್ನು ನಿರ್ಮಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಹೀಗಾಗಿ ನಾವು ಆಡುವ ಮಾತುಗಳನ್ನು ತುಂಬ ಎಚ್ಚರಿಕೆಯಿಂದ ಆಡಬೇಕು. ಆಡುವ ಮೊದಲು ನಾಲ್ಕು ಸಲ ಯೋಚಿಸಿ ಮಾತನಾಡಬೇಕು.

ಹಾವಾಡಿಗ ಹಾವನಾಡಿಸುವಲ್ಲಿ ತನ್ನ ಕಾಯ್ದುಕೊಂಡು ಹಾವನಾಡಿಸುವಂತೆ,
ಆವ ಮಾತನಾಡಿದಡೂ ತನ್ನ ಕಾಯ್ದು ಆಡಬೇಕು ಅದೆಂತೆಂದಡೆ,
ತನ್ನ ವಚನವೆ ತನಗೆ ಹಗೆಯಹುದಾಗಿ ಅನ್ನಿಗರಿಂದ ಬಂದಿತ್ತೆನ್ನಬೇಡ.
ಅಳಿವುದು ಉಳಿವುದು ತನ್ನ ವಚನದಲ್ಲಿಯೆ ಅದೆ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ,
ಹಗೆಯು ಕೆಳೆಯು ತನ್ನ ವಚನವೇ, ಬೇರಿಲ್ಲ।

'ಮಾತೇ ಮುತ್ತು, ಮಾತೇ ಮಿತ್ತು (ಸಾವು)' ಎಂಬ ಗಾದೆಯಂತೆ ವ್ಯಕ್ತಿಯು ಆಡುವ ಮಾತುಗಳು ತನಗೆ ಒಳಿತನ್ನು ಉಂಟುಮಾಡಬಲ್ಲವು ಇಲ್ಲವೇ ಕೇಡನ್ನು ತರಬಲ್ಲವು. ಆದುದರಿಂದ ವ್ಯಕ್ತಿಯು ತಾನಾಡುವ ಮಾತುಗಳ ಬಗ್ಗೆ ಸದಾಕಾಲ ಎಚ್ಚರದಿಂದ ಇರಬೇಕು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ. ಅಳಿವು ಉಳಿವು ತನ್ನ ಮಾತಿನಲ್ಲಿಯೇ ಇರುತ್ತದೆ. ವ್ಯಕ್ತಿಯ ಜೀವನದಲ್ಲಿನ

ಒಳಿತು–ಕೆಡುಕುಗಳಿಗೆ, ವ್ಯಕ್ತಿಯು ಜೀವನದಲ್ಲಿ ಹಾಳಾಗುವುದಕ್ಕೆ–ಏಳಿಗೆಯನ್ನು ಹೊಂದುವುದಕ್ಕೆ, ಆತ ತನ್ನ ನಿತ್ಯ ಜೀವನದಲ್ಲಿ ಇತರರೊಡನೆ ಒಡನಾಡುವಾಗ–ವ್ಯವಹರಿಸುವಾಗ ಬಳಸುವ ಮಾತುಗಳೇ ಕಾರಣವಾಗುತ್ತವೆ. ಅಂದರೆ ವ್ಯಕ್ತಿಯು ಆಡುವ ಮಾತುಗಳು ಕೇಳುಗರ ಮನಗೆಲ್ಲುವಂತಿರಬೇಕೇ ಹೊರತು ಕೇಳುಗರ ಮನವನ್ನು ಗಾಸಿಗೊಳಿಸುವಂತಿರಬಾರದು. ವ್ಯಕ್ತಿಯು ಆಡುವ ಮಾತುಗಳು ತನಗೆ ಮಾತ್ರವಲ್ಲದೇ ಸಹಮಾನವರಿಗೆ ಮತ್ತು ಸಮಾಜದ ನೆಮ್ಮದಿಯ ಬದುಕಿಗೆ ಪೂರಕವಾಗಬಲ್ಲವು ಇಲ್ಲವೇ ಹಾನಿಯನ್ನುಂಟುಮಾಡಬಲ್ಲವು. ಆದುದರಿಂದ ಆಡುವ ಮಾತುಗಳ ಬಗ್ಗೆ ವ್ಯಕ್ತಿಯಲ್ಲಿ ಸಾಮಾಜಿಕ ಎಚ್ಚರವಿರಬೇಕು ಎಂಬ ಇಂಗಿತವನ್ನು ಈ ನುಡಿಗಳು ಸೂಚಿಸುತ್ತಿವೆ.

ಒಳ್ಳೆಯ ಮಾತುಗಳನ್ನೇ ಆಡುವುದು ನಮ್ಮ ವ್ಯಕ್ತಿತ್ವದ ಭಾಗವೇ ಆಗಬೇಕು. ಆಗ ಮಾತ್ರವೇ ಕೆಟ್ಟಮಾತು ಆಡುವುದು, ಆಡಿದಮೇಲೆ ಅದಕ್ಕಾಗಿ ಪರಿತಪಿಸುವುದು ತಪ್ಪುತ್ತದೆ. ಅಷ್ಟೇ ಅಲ್ಲ, ಒಳ್ಳೆಯ ಮಾತಿನ ಮೂಲಕ ನಾವು ಸ್ನೇಹವನ್ನು ಸಂಪಾದಿಸಿಕೊಳ್ಳಲು ಸಾಧ್ಯ; ಒದಗಿರುವ ಸ್ನೇಹವನ್ನು ಉಳಿಸಿಕೊಳ್ಳಲೂ ಸಾಧ್ಯ. ನಾಲಗೆಯೇ ನಮ್ಮ ಪ್ರಪಂಚವನ್ನು ನಿರ್ಮಿಸುವ ಜಾದುಗಾರ ಎಂಬುದನ್ನು ನಾವು ಎಂದಿಗೂ ಮರೆಯಬಾರದು. ದಾಸರು 'ಆಚಾರವಿಲ್ಲದ ನಾಲಗೆ, ನಿನ್ನ ನೀಚಬುದ್ಧಿಯನ್ನು ಬಿಡು ನಾಲಗೆ' ಎಂದು ಹಾಡಿ ನಾಲಗೆಯ ಕೆಟ್ಟತನದ ಬಗ್ಗೆ ಎಚ್ಚರಿಸಿದ್ದಾರೆ.

ಸಕಲ ಜೀವಿಗಳೂ ತನ್ನಂತೆಯೇ, ತನ್ನವರು ಎಂಬ ಭಾವನೆಯಿಂದ ಬದುಕಬೇಕು. ಅನ್ಯರಿಗೆ ಹಿಂಸೆ ನೀಡಿ ಅನುಭವಿಸುವ ಸುಖವು ಮೋಕ್ಷಸಾಧುವಲ್ಲ. ಆದ್ದರಿಂದ ಜೀವಹಿಂಸೆ ಮಾಡದೆ ದಯಾಭಾವದಿಂದ ಬದುಕುವುದು ನೈತಿಕ ಹಾಗೂ ಆದರ್ಶಮಯವಾಗಿರುತ್ತದೆ.

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ,
ಹಲವು ಪ್ರಾಣಿಯ ಕೊಂದು, ನಲಿನಲಿದಾಡುವ,
ತನ್ನ ಮನೆಯಲೊಂದು ಶಿಶು ಸತ್ತಡೆ
ಅದಕ್ಕೆ ಮರುಗುವಂತೆ ಅವಕೇಕೆ ಮರುಗ ?
ಅದೆಂತೆಂದಡೆ
'ಸ್ವಾತ್ಮಾನಮಿತರಂ ಚೇತಿ ಭಿನ್ನತಾ ನೈವ ದೃಶ್ಯತಾಂ
ಸರ್ವಂ ಚಿಜ್ಞ್ಯೋತಿರೇವೇತಿ ಯಃ ಪಶ್ಯತಿ ಸ ಪಶ್ಯತಿ'
ಎಂದುದಾಗಿ,
ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ.
ಇದು ಕಾರಣ, ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು
ಜೀವಹಿಂಸೆ ಮಾಡುವ ಮಾದಿಗರನೇನೆಂಬೆನಯ್ಯಾ ?

ಮೇಲಿನ ಅಕ್ಕನ ವಚನವು ಅರ್ಥಪೂರ್ಣವೂ ಇಂದಿನ ವಿದ್ಯಮಾನಕ್ಕೆ ಪ್ರಸ್ತುತವೂ ಆಗಿದೆ. ಹಾಗೂ ವಾಸ್ತವ ಜಗತ್ತಿನ ಕ್ರೂರತೆಯನ್ನು ಬಿಂಬಿಸುತ್ತದೆ. ತನ್ನ ಮಗನಿಗಾಗಿ ಹೀಗೆ ಗೋಳಾಡುವ ಬೆಸ್ತನ ಹೃದಯ, ಇಷ್ಟೊಂದು ಪ್ರಾಣಿಗಳನ್ನು ಚುಚ್ಚಿಕೊಲ್ಲುವಾಗ, ಅವುಗಳ ಸಂಕಟವನ್ನು ಕಂಡು ಸ್ವಲ್ಪವೂ ಮರುಗಲಿಲ್ಲವೆ ? ಎಂದು ಆಲೋಚಿಸಿತು ಮಹಾದೇವಿಯ ಮನಸ್ಸು. ಈ ವಯಸ್ಸಿನಲ್ಲಿ ತನ್ನ ಏಕೈಕ ಪುತ್ರನನ್ನು ಕಳೆದುಕೊಂಡ ಜಾಲಗಾರನ ದುಃಖ ಮಹಾದೇವಿಯನ್ನು ಸಂಕಟಗೊಳಿಸಿತು. ಆದರೆ ಅದಕ್ಕಿಂತ ಹೆಚ್ಚಾಗಿ ಅವಳನ್ನು ಸಂಕಟಗೊಳಿಸಿದುದು, ಜನಗಳು ತಮ್ಮ ಸುಖಕ್ಕಾಗಿ ಇತರ ಪ್ರಾಣಿಗಳನ್ನು ನಿಷ್ಕರುಣೆಯಿಂದ ಬಲಿಕೊಡುವ ಅಂಶ. ಪ್ರಾಣಿಗಳನ್ನೆಲ್ಲಾ ನಿಷ್ಕಾರುಣವಾಗಿ, ನಿರ್ದಾಕ್ಷಣ್ಯವಾಗಿ ಅಟ್ಟಹಾಸ ಮೆರೆಯುವ ಬೇಟೆಗಾರ ತನ್ನ ಮನೆಯಲ್ಲಿ ಶಿಶು ಸತ್ತರೆ ಮರುಗುತ್ತಾನೆ, ಅಳುತ್ತಾನೆ, ಗೋಗರೆಯುತ್ತಾನೆ, ಕಾಣದ ದೇವರ ಶಪಿಸುತ್ತಾನೆ. ಇದೇ ಭಾವ ತಾನು ಕೊಲ್ಲುವ ಇತರ ಪ್ರಾಣಿ ಪಕ್ಷಿಗಳ ಮೇಲೆ ಏಕಿಲ್ಲವೆಂಬುದು ಅಕ್ಕನ ಪ್ರಶ್ನೆಯಾಗಿದೆ.

ಅದನ್ನು ಕಂಡೇ ಬಸವಣ್ಣ,
ದಯವಿಲ್ಲದ ಧರ್ಮವದೇವುದಯ್ಯ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ|
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ|

ರಾಜ ಮಹಾರಾಜರು ಆಳುತ್ತಿದ್ದ ಕಾಲದಲ್ಲಿ ರಾಜ್ಯಗಳ ವಿಸ್ತರಣೆಗಾಗಿ ನಡೆದ ಕದನಗಳಲ್ಲಿ ಹರಿದ ಮಾನವ ರಕ್ತಕ್ಕಿಂತಲೂ ಧರ್ಮದ ಹೆಸರಿನಲ್ಲಿ ನಡೆದ ಕೊಲೆ ಸುಲಿಗೆಯಲ್ಲಿ ಹರಿದ ನೆತ್ತರಿನ ಪ್ರಮಾಣವೇ ಹೆಚ್ಚು ಎಂಬುದು ಜಗತ್ತಿನ ಚರಿತ್ರೆಯ ಉದ್ದಕ್ಕೂ ಕಂಡುಬರುತ್ತದೆ. ಎಲ್ಲಾ ಧರ್ಮಗಳು ಪ್ರತಿಪಾದಿಸುವದು ದಯೆ, ದಯವೇ ಧರ್ಮದ ಮೂಲಾಂಶ, ಸಮಷ್ಟಿ ಹಿತವನ್ನು ಸಾಧಿಸಬೇಕಾದರೆ ದಯವಿರಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಇಲ್ಲದಿರುವಲ್ಲಿ ದ್ವೇಷ–ರಾಗಗಳ ವಿಜೃಂಭಿಸಿ ಸರ್ವನಾಶಕ್ಕೆ ಕಾರಣವಾಗುತ್ತದೆ. ಆದ್ದರಿಂದ ಧರ್ಮವೆಂಬುದು ಮಾನವ ಸಮುದಾಯಗಳ ಜೀವನದ ಆಚರಣೆ, ಸಂಪ್ರದಾಯ, ಕಟ್ಟುಪಾಡುಗಳ ಪಾಲನೆಯಂತೆ ಕಂಡುಬರಬೇಕು. ಅಂತರಂಗದಲ್ಲಿಯೂ ಮಾನವ ಸಮುದಾಯಗಳನ್ನು ಬೆಸೆಯುವ ಸಂಗತಿಗಳನ್ನು ಒಳಗೊಂಡಿರಬೇಕು. ಈ ಹಿನ್ನೆಲೆಯಲ್ಲಿ ಧರ್ಮದ ಆಚರಣೆಯಲ್ಲಿ ಕರುಣೆಯ ನಡೆನುಡಿಗಳು ತುಂಬಾ ದೊಡ್ಡ ಪಾತ್ರವನ್ನು ವಹಿಸಬೇಕೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

ಹೊಗಳಿಕೆಗೆ ಮೈಮರೆಯುವುದು, ಅದಕ್ಕೆ ಉಬ್ಬಿಹೋಗುವದು, ತೆಗಳಿಕೆಗೆ ಸಿಟ್ಟಿಗೇಳುವುದು ಕಿಡಿಕಾರುವುದು, ಹೋರಾಟಕ್ಕೆ ನಿಲ್ಲುವುದು ಮಾನವನ ಗುಣ. ಕೋಪ–ತಾಪ, ಹೊಗಳಿಕೆ–ತೆಗಳಿಕೆ, ಹಸಿವೆ–ತೃಷೆ ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸಿ ಸಮಚಿತ್ತತೆಯನ್ನು ಪ್ರದರ್ಶಿಸುವುದು ಮನುಷ್ಯನ ನೈತಿಕ ಮೌಲ್ಯಗಳಲ್ಲೊಂದು. ಅಂಥ ಸಮತೆಯನ್ನು ಕಾಯ್ದುಕೊಳ್ಳುವುದಕ್ಕೆ ಭಾವೋದ್ವೇಗಗಳನ್ನು ಹತ್ತಿಕ್ಕಬೇಕಾಗುತ್ತದೆ.

ಆರೇನೆಂದರೂ ಓರಂತಿಪ್ಪುದೇ ಸಮತೆ,
ಆರು ಜರೆದರೂ ಅವರನ್ನ ಮನದ ಕಾಳಿಕೆಯ ಕಳೆದರೆಂಬುದೇ ಸಮತೆ.
ಆರು ಸ್ತೋತ್ರ ಮಾಡಿದರೂ ಅವರೆನ್ನ ಜನ್ಮದ ಹಗೆಗಳಂತೆ ಸಮತೆ,
ಇಂತಿದು ಗುರುಕಾರುಣ್ಯ.
ಮನ ವಚನ ಕಾಯದಲ್ಲಿ ಅಹಿತವಿಲ್ಲದೆ
ಕಪಿಲಸಿದ್ಧ ಮಲ್ಲಕಾರ್ಜುನಯ್ಯ ನಿಮ್ಮವರ ನೀನೆಂಬುದೇ ಸಮತೆ|

ಯಾರು ಏನೇ ಅಂದರೂ ಒಂದೇ ರೀತಿಯ ಸ್ವೀಕಾರ ಗುಣವಿರಬೇಕು. ತೆಗಳಿದವರು ನಮ್ಮಲ್ಲಿನ ಕಪ್ಪ(ಕೆಟ್ಟದ್ದು)ನ್ನು ಕಳೆಯುವವರೆಂದೂ, ಯಾರು ಹೊಗಳುವರೋ ಅವರನ್ನು ಅಪ್ಪಿಕೊಳ್ಳುವ ಬದಲು ಅವರನ್ನು ಹಗೆಗಳಂತೆ ಕಂಡು ದೂರವಿಡುವ ಸಮತೆ ಬೆಳೆಸಿಕೊಳ್ಳಬೇಕು. ನಿಮ್ಮವರೆಂದರೆ ಯಾರು? ದೈವಭಕ್ತರಿಗೆ ನಿಮ್ಮವರೆನ್ನಬೇಕಲ್ಲವೇ? ದೈವಭಕ್ತರಾದವರು– ಯಾವ ಜಾತಿಯಲ್ಲಿ ಹುಟ್ಟಿದರೇನು, ಯಾವ ಗೋತ್ರದಲ್ಲಿ ಬೆಳೆದರೇನು, ಅವರ ಮತ ಯಾವುದೇ ಇರಲಿ, ಅವರ ಪಂಥವು ಏನೇ ಇರೇಲಿ ದೈವಭಕ್ತರೆಲ್ಲ ಒಂದೇ ಕುಲದವರು. ಅವರು ಒಂದೇ ಪಂಥವನ್ನು ಮೆಟ್ಟಿದವರು. ಒಂದೇ ಮತವನ್ನು ಅನುಸರಿಸತಕ್ಕವರು. ಅವರನ್ನೆಲ್ಲ

ಸಮದೃಷ್ಟಿಯಿಂದ ಕಾಣುವ ಸಹನೆ ತಾಳ್ಮೆ ಬೇಕು. ಅದು ಹೃದಯಾಂತರಾಳದಿಂದ ಹುಟ್ಟಬೇಕು.

ಸಕಲೇಶ ಮಾದರಸರೂ ಕೂಡ ಇದೇ ಮಾತನ್ನೇಳುತ್ತಾರೆ.
ಇದಿರೆನ್ನ ಹಳಿವವರು ಮತಿಯ ಬೆಳಗುವರು
ಮನದ ಕಾಳಿಕೆಯ ಕಳೆವವರೆನ್ನ ನಂಟರು
ದುರಾಚಾರದಲ್ಲಿ ನಡೆವವರು ಕನ್ನಡಿ ಎನಗೆ
ಹೇಯೋಪಾದಿಯ ತೋರುವವರು
ಇದು ಕಾರಣ ನಾನನ್ಯ ದೇಶಕ್ಕೆ ಹೋಗೆನು
ಸರಳೇಶ್ವರ ದೇವರ ತೋರುವರೊಳರಿಲ್ಲಿಯೆ।

ಯಾರು ನಮ್ಮನ್ನು ಹೀಯಾಳಿಸಿ ಆರೋಪಿಸುವರೋ ಅವರೇ ನಮ್ಮ ಬುದ್ಧಿಯನ್ನು ಬೆಳಗುವ ಮಹನೀಯರು, ಮನಸ್ಸಿನ ಕೆಟ್ಟತನವನ್ನು ತೊಳೆಯುವವರೇ ನಿಜವಾದ ಬಂಧುಗಳು. ಕೆಟ್ಟ ಕೆಲಸ ಮಾಡುವವರನ್ನು ನೋಡಿ ಅವರಂತೆ ಆಗಬಾರದೆಂದು ತಿಳಿದಿ ನಾವು ಬದುಕನ್ನು ಹಸನು ಮಾಡಿಕೊಳ್ಳಬಹುದು ಅವರು ಕನ್ನಡಿ ಇದ್ದಂತೆ, ಇಂತಹವರ ಸುತ್ತಲೂ ಇದ್ದು, ಇವರನ್ನು ಅರಿತು ಸೈರಿಸಿಕೊಂಡು ಬದುಕಿದರೆ ಇಲ್ಲಿಯೇ ದೈವವನ್ನು ಕಾಣಬಹುದು ಎಂದಿದ್ದಾರೆ.

ಹೀಗೆ ಶರಣರು ಸಾರಿದ ನೈತಿಕ ಮೌಲ್ಯಗಳು ವಚನ ಸಾಹಿತ್ಯದ ಮೂಲಕ ಇಡೀ ಜಗತ್ತಿನ ಗೌರವ ಕಾಪಾಡುತ್ತವೆ. ಭೂಮಿಯ ಮಹತ್ವ ಸಾರುತ್ತವೆ. ಲೋಕದ ಜನರ ಹಿತಚಿಂತನೆ ಮಾಡುತ್ತದೆ. ಮಾನವರ ಹಿತ ಕಾಪಾಡುವುದೇ ವಚನಸಾಹಿತ್ಯದ ಮುಖ್ಯ ಮೌಲ್ಯವಾಗಿದೆ. ವಚನ ಸಾಹಿತ್ಯವು ವಿಶ್ವಸಾಹಿತ್ಯಕ್ಕೆ ಮಾರ್ಗದರ್ಶಕವಾಗಿದೆ. ಇಲ್ಲಿಯವರೆಗೆ ಲಭ್ಯವಾದ ಸಹಸ್ರಾರು ವಚನಗಳು ಜಗತ್ತಿನ ಎಲ್ಲ ಜನ ಸಮುದಾಯಗಳ ಆಸ್ತಿಯಾಗಿದ್ದು ಬದುಕಿನ ಮೌಲ್ಯಗಳನ್ನು ಬಿತ್ತರಿಸಿವೆ.

**ಪರಾಮರ್ಶನ ಕೃತಿಗಳು**


1. ನೈತಿಕ ಮತ್ತು ಭಕ್ತಿಯ ವಚನಗಳು, ಸಂ:ಫ.ಗು.ಹಳಕಟ್ಟಿ, ಶಿವಾನುಭವ ಗ್ರಂಥಮಾಲಾ, ವಿಜಾಪುರ, 1931
2. ಸಂಕೀರ್ಣ ವಚನ ಸಂಪುಟ–6, ಸಂ:ಎಸ್.ಶಿವಣ್ಣ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1993
3. ಬಸವಣ್ಣನವರ ವಚನ ಸಂಪುಟ, ಸಂ:ಡಾ.ಎಂ.ಎಂ.ಕಲಬುರ್ಗಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1993
4. ವಚನ ಕಾವ್ಯ ಚಿಂತನೆ, ಸಂ:ಡಾ.ಎಸ್.ಎಂ.ಹಿರೇಮಠ, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗ ವಿ.ವಿ, ಗುಲ್ಬರ್ಗ, 2011
5. ಕದಳಿಯ ಕರ್ಪುರ, ಡಾ.ಎಚ್,ತಿಪ್ಪೇರುದ್ರಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು, 2011